**<u>ದಿ : 12-12-2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು1 ನೇ ಎದುರುದಾರರ ಪರ ಶ್ರೀ ಹೆಚ್ ವಿ ಕೆ ಎಸ್. ವಕೀಲರಿಂದ</u> :**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ. ಕಂಪೆನಿ ಪರವಾಗಿ ತನಿಖೆ ಮಾಡಿಸಲಾಗಿದೆ. **1** ನೇ ಎದುರುದಾರರ ವಾಹನ ಸಂಖ್ಯೆ ಜಿಎ-**02**-ಇ-**1753** ರ ಮೂಲ ವಿಮಾ ದಾಖಲೆ ನೋಡುತ್ತಿದ್ದೇನೆ ಅದೇ ಆಗಿರುತ್ತದೆ ಅದನ್ನು ನಿಆರ್-**10** ಎಂದು ಗುರುತಿಸಲಾಯಿತು. ಕಲಿಕಾ ಲೈಸನ್ಸ್ ಹೊಂದಿರುವವರು ಮೇಲೆ ಹೇಳಿದ ವಾಹನವನ್ನು ಚಾಲನೆ ಮಾಡಲು ಅರ್ಹತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಮೇಲ್ಕಾಂಡ ದ್ವಿಚಕ್ರ ವಾಹನವನ್ನು ನಾನು ಖುದ್ದಾಗಿ ಪರಿಶೀಲಿಸಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ದಾಖಲೆಗಳಲ್ಲಿ ಸವಾರ ಎಲ್ ಸಂಕೇತ ನಮೂದಿಸಿದ ಬಗ್ಗೆ ಕಂಡು ಬಂದಿರುವುದಿಲ್ಲ ಎಂದರೆ ಸರಿ. ಸಂಬಂಧಪಟ್ಟ ಪೊಲೀಸರು ಅಂತಿಮ ವರದಿ ಸಲ್ಲಿಸುವಾಗ ಸವಾರನ ವಿರುದ್ಧ ಐ ಎಂ ವಿ ಕಾಯ್ದೆ **187** ಮತ್ತು ಸೆಕ್ಷನ್ **3(1)** ಕಲಂ ಗಳನ್ನು ಅಳವಡಿಸಿಲ್ಲ ಎಂದರೆ ಸಾಕ್ಷಿಯು ಅವರು ಶಾಮೀಲಾಗಿ ಕೈ ಬಿಟ್ಟಿರುತ್ತಾರೆ ಎನ್ನುತ್ತಾರೆ. ನಾವು ವೈಯುಕ್ತಿಕವಾಗಿ ಆರೋಪಿಸುತ್ತಿದ್ದೇವೆ ಎಂದರೆ ಸರಿಯಲ್ಲ. **1** ನೇ ಎದುರುದಾರರಿಗೆ ಅಪಘಾತವಾಗುವ ಸಾಂದರ್ಭದಲ್ಲಿ ಯುಕ್ತ ಚಾಲಾನ ಪರವಾನಿಗೆ ಇತ್ತು ಎಂದರೆ ಸಾಕ್ಷಿಯು ನಮಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ವಿಮಾ ದಾಖಲೆ ಯಾವುದೇ ಶರತ್ತುಗಳನ್ನು ಉಲ್ಲಂಘನೇ ಅಗದಿದ್ದರು ಕೂಡ ನಮ್ಮ ಕಂಪೆನಿಯ ಬಾದ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ ನೀಡಲಾಗಿದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u> ಅರ್ಜಿದಾರರ ಪರವಾಗಿ ಶ್ರೀ ಹೆಚ್ ಆರ್ ಎಸ್ ವಕೀಲರಿಂದಃ**

ನಿಆರ್-9 ರ ಸಂಬಂಧ ನನ್ನ ವಕೀಲರು ನೀಡುತ್ತಾರೆ. ಸದ್ರಿ ಕಾರ್ಮಿಕ ಕಾನೂನು ಅಸಿತ್ವದಲ್ಲಿ ಇರುವ ಬಗ್ಗೆ ನಮ್ಮ ಕಂಪೆನಿಯಿಂದ ಪ್ರತ್ಯೇಕ ಕೋರಿಕೆ ಸಲ್ಲಿಸಿ ತರಿಸಿಕೊಂಡಿಲ್ಲ ಆದರೆ ನಮ್ಮ ವಕೀಲರು ಸಹಾಯದಿಂದ ಹಾಜರುಪಡಿಸಲಾಗಿದೆ. ಅದನ್ನು ನಮ್ಮ ಕಂಪೆನಿಯ ಸಾಧನೆಗೊಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದ್ರಿ ಕುವೈಟ್ನಲ್ಲಿ ಯಾವುದೇ ಲಿಖಿತ ಕಾನೂನುಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ಮೃತ ಒಂದು ತಿಂಗಳಿಗೆ **800** ದಿನಾರ್ ಕೊಡುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎನ್ನುತ್ತಾರೆ. ಅದನ್ನು ಭಾರತದ ರೂಪಾಯಿಗೆ ಪರಿವರ್ತಿಸಿದಲ್ಲಿ **1** ಲಕ್ಷದ **94** ಸಾವಿರ ಆಗುತ್ತಿತ್ತು ಎಂದರೆ ಸಾಕ್ಷಿಯು ಮೊದಲು ವ್ಯತ್ಯಾಸ ಇತ್ತು ನಂತರ ಸರಿ ಎನ್ನುತ್ತಾರೆ. ಆ ಸಂಬಳವನ್ನು ಅನುಸರಿಸಿಕೊಂಡು ಮೃತನ ಕುಟುಂಬಕ್ಕೆ ಪರಿಹಾರ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**